ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp. 73-82.**
**©*IIMRD*, Mysuru**

IIMRD JOURNALS

**www.iimrd.com**

# ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಅವರ ಅಭಿವೃದ್ಧಿ ಮಾದರಿಗಳು

**ಮಂಜುನಾಥ ಜೆ*** & **ಶ್ರೀಪಾದ್ ಕುಲಕರ್ಣಿ****

*ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಸಂಜೆ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

***ಸಾರಾಂಶ: (Abstract)***

*ಆಧುನಿಕ ಭಾರತದ ನಿರ್ಮಾಪಕರು, ಭಾರತದ ಸಂವಿಧಾನದ ಶಿಲ್ಪಿ, ಶೋಷಣೆಯ ವಿರುದ್ಧ ಹೋರಾಟದ ನಾಯಕರೂ ಆದ ಅಂಬೇಡ್ಕರ್ ವಿಶ್ವದ ಶ್ರೇಷ್ಠ ಮಾನವತವಾದಿ. ಸಾಮಾಜಿಕವಾಗಿ ಆಶಾಕಿರಣವಾದ ಅಂಬೇಡ್ಕರ್ ಜಾತ್ಯಾತೀತ, ಸಮಾಜವಾದಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲವಾದ ವಿಶ್ವಾಸವಿಟ್ಟಿದ್ದರು. ಕೋಮುವಾದ ಸಮಸ್ಯೆ, ಫೆಡರಲ್ ವ್ಯವಸ್ಥೆ, ಆರ್ಥಿಕ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾದ ಯೋಚನೆ ಹಾಗೂ ಯೋಜನೆಗಳನ್ನು ಹೊಂದಿದವರಾಗಿದ್ದರು, ಗಾಂಧೀಜಿಯವರ ಬಗ್ಗೆ ಹೊಂದಿದ್ದ ಅಭಿಪ್ರಾಯಗಳ ಜೊತೆಗೆ ಇನ್ನೂ ಹಲವಾರು ವಿಷಯಗಳಲ್ಲಿ ತಮ್ಮ ವಿರೋಧ ಅಭಿಪ್ರಾಯಗಳನ್ನು ಹೊಂದಿದ್ದ ಅಂಬೇಡ್ಕರ್ ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸಿ ಐಕ್ಯತೆಯನ್ನು ಸಾಧಿಸುತ್ತಾ ಅವರು ನಡೆಸಿದ ಹೋರಾಟ ಅವರ ವಿಚಾರಧಾರೆ ಇಂದಿಗೂ ಮಹತ್ವಪೂರ್ಣವಾದವು. ಈ ಮೇಲಿನ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡುವ ಉದ್ದೇಶವನ್ನು ಈ ಲೇಖನ ಹೊಂದಿದೆ.*

***ಮುಖ್ಯಪದಗಳು: (Keywords)*** *ಸಮಾಜವಾದ, ಪ್ರಜಾಪ್ರಭುತ್ವ, ಜಾತ್ಯತೀತತೆ, ಆರ್ಥಿಕತೆ, ಮೀಸಲಾತಿ.*

**ಪೀಠಿಕೆ**

ಡಾ.ಬಿ.ಆರ್. ಅಂಬೇಡ್ಕರ್ ಅವರು ಆಧುನಿಕ ಭಾರತವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ ಪ್ರಸಿದ್ಧ ಸಮಾಜ ಸುಧಾರಕ, ಅರ್ಥಶಾಸ್ತ್ರಜ್ಞ ಮತ್ತು ರಾಜಕಾರಣಿ. ಅವರು ಭಾರತೀಯ ಸಂವಿಧಾನಕ್ಕೆ ನೀಡಿದ ಕೊಡುಗೆ ಮತ್ತು ಸಮಾಜದ ಅಂಚಿನಲ್ಲಿರುವ ವರ್ಗಗಳ ಉನ್ನತಿಗಾಗಿ ದುಡಿದವರಲ್ಲಿ ಅತ್ಯಂತ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ. ಅಂಬೇಡ್ಕರ್ ಅವರು ಭಾರತದಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡಿದ್ದಾರೆ. ಸಾಮಾಜಿಕ ತಾರತಮ್ಯ ಮತ್ತು ಆರ್ಥಿಕ ಶೋಷಣೆಗೆ ಒಳಗಾದ ಸಮಾಜದ ಅಂಚಿನಲ್ಲಿರುವ ವರ್ಗಗಳು, ವಿಶೇಷವಾಗಿ ದಲಿತರು ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ಅವರು ವಿವಿಧ ಅಭಿವೃದ್ಧಿ ಮಾದರಿಗಳನ್ನು ಅಭಿವೃದ್ಧಿಪಡಿಸಿದರು. ಡಾ ಅಂಬೇಡ್ಕರ್ ಪ್ರಸ್ತಾಪಿಸಿದ ಕೆಲವು ಅಭಿವೃದ್ಧಿ ಮಾದರಿಗಳು **ಗ್ರಾಮ ಗಣರಾಜ್ಯ ಮಾದರಿ**ಯನ್ನು ಒಳಗೊಂಡಿವೆ. ಗ್ರಾಮ ಗಣರಾಜ್ಯ ಮಾದರಿಯು ಸ್ವಯಂ ಆಡಳಿತ ಮತ್ತು ಅಧಿಕಾರದ

*Please cite this article as: ಮಂಜುನಾಥ ಜೆ & ಶ್ರೀಪಾದ್ ಕುಲಕರ್ಣಿ.* (2023). ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಅವರ ಅಭಿವೃದ್ಧಿ ಮಾದರಿಗಳು. ಪ್ರತಿಬಿಂಬ:*ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ,4(5). ಪು.ಸಂ. 73–82.*

ವಿಕೇಂದ್ರೀಕರಣವನ್ನು ಪರಿಣಾಮಕಾರಿಯಾಗಿ ಉತ್ತೇಜಿಸುತ್ತದೆ ಎಂದು ಡಾ ಅಂಬೇಡ್ಕರ್ ನಂಬಿದ್ದರು. ಅವರ ಪ್ರಕಾರ, ಗ್ರಾಮ ಗಣರಾಜ್ಯ ಮಾದರಿಯು ಸಮಾಜದ ಅಂಚಿನಲ್ಲಿರುವ ವರ್ಗಗಳನ್ನು ಸಬಲಗೊಳಿಸುತ್ತದೆ ಮತ್ತು ಅವರಲ್ಲಿ ಸಾಮೂಹಿಕ ಮಾಲೀಕತ್ವದ ಭಾವನೆಯನ್ನು ಉಂಟುಮಾಡುತ್ತದೆ.

**ಜಾತಿ ವಿನಾಶ ಮಾದರಿ**

ಡಾ.ಅಂಬೇಡ್ಕರ್ ಅವರು ಸಾಮಾಜಿಕ ಅಸಮಾನತೆ ಮತ್ತು ತಾರತಮ್ಯಕ್ಕೆ ಮೂಲ ಕಾರಣವಾಗಿ ಕಂಡ ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಪ್ರತಿಪಾದಿಸಿದರು. ಜಾತಿ ವಿನಾಶವು ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ತತ್ವಗಳ ಆಧಾರದ ಮೇಲೆ ಸಮಾಜವನ್ನು ರಚಿಸುತ್ತದೆ ಎಂದು ಅವರು ನಂಬಿದ್ದರು.

**ಕೈಗಾರಿಕೀಕರಣ ಮಾದರಿ**

ಡಾ ಅಂಬೇಡ್ಕರ್ ಅವರು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಕೈಗಾರಿಕೀಕರಣದ ಪ್ರಾಮುಖ್ಯತೆಯನ್ನು ಗುರುತಿಸಿದ್ದಾರೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸಲು ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ–ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಯನ್ನು ಅವರು ಪ್ರಸ್ತಾಪಿಸಿದರು.

**ಶಿಕ್ಷಣ ಮಾದರಿ**

ಡಾ ಅಂಬೇಡ್ಕರ್ ಅವರು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. ಸಮಾಜದ ಕಟ್ಟಕಡೆಯ ವರ್ಗದವರಿಗೆ ಗುಣಮಟ್ಟದ ಶಿಕ್ಷಣದ ಪ್ರವೇಶವನ್ನು ಒದಗಿಸಲು ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಡಲು ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಲು ಅವರು ಪ್ರಸ್ತಾಪಿಸಿದರು. ಒಟ್ಟಾರೆಯಾಗಿ, ಡಾ ಅಂಬೇಡ್ಕರ್ ಅವರ ಅಭಿವೃದ್ಧಿ ಮಾದರಿಗಳು ಸಮಾಜದ ಅಂಚಿನಲ್ಲಿರುವ ವರ್ಗಗಳ, ವಿಶೇಷವಾಗಿ ದಲಿತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಬಲೀಕರಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದವು.

**ಡಾ.ಬಿ.ಆರ್.ಅಂಬೇಡ್ಕರ್‌ರವರ ಅಭಿವೃದ್ಧಿ ಮಾದರಿಗಳು**

**ಡಾ.ಬಿ.ಆರ್.ಅಂಬೇಡ್ಕರ್ ಒಂದು ವಾಸ್ತವ ಸತ್ಯ**

ಅರ್ಥಾತ್ ದೇಶದಲ್ಲಿ ಸಂವಿಧಾನ ವಿಧಿ–17ರ ಅಸ್ಪೃಶ್ಯತೆ ದೌರ್ಜನ್ಯಗಳನ್ನು ಸರ್ಕಾರಗಳು ಹತ್ತು ವರ್ಷಗಳಲ್ಲಿ ಸಂಪೂರ್ಣ ನಿಯಂತ್ರಿಸುವ ಭರವಸೆಯಿಂದ ಮೀಸಲಾತಿಯನ್ನು ಹತ್ತು ವರ್ಷ ಅವಧಿಗೆ ಸೀಮಿತಗೊಳಿಸಿದರು. ಆದರೆ ಇಂದು ಅಸ್ಪೃಶ್ಯತೆ, ದೌರ್ಜನ್ಯಗಳನ್ನು ನಿಯಂತ್ರಿಸದೆ ಬಾಬಾಸಾಹೇಬರ ಆಶಯಕ್ಕೆ ವಿರುದ್ಧವಾಗಿ ಅವುಗಳಿಗೆ ಪರೋಕ್ಷ ಪ್ರೋತ್ಸಾಹ ನೀಡಿ, ತಮ್ಮ ಮತಬ್ಯಾಂಕ್ ಹೆಚ್ಚಿಸಿಕೊಳ್ಳಲು ಮೀಸಲಾತಿಯ ಸಲಕರಣೆಯನ್ನು ರಾಜಕೀಯ ವ್ಯಕ್ತಿಗಳು ಬಳಸುತ್ತ ಮೀಸಲಾತಿ ಕಾಲಮಿತಿ ಹೆಚ್ಚಿಸುವುದರ ಜೊತೆಗೆ ಅಸ್ಪೃಶ್ಯೇತರ ಬುಡಕಟ್ಟೇತರ ಜಾತಿ ವರ್ಗಗಳನ್ನು ಮೀಸಲಾತಿಯಲ್ಲಿ ಸೇರಿಸುತ್ತಿರುವುದು ಬಾಬಾ ಸಾಹೇಬರ ಮೀಸಲಾತಿ ಚಿಂತನೆಗೆ ಪೆಟ್ಟು ಕೊಟ್ಟಿರುವವರು. ರಾಜಕೀಯ ಮೀಸಲಾತಿಯಿಂದ ದಲಿತರ ಹಕ್ಕುಗಳ ರಕ್ಷಣೆ ಆಗಬಹುದೆಂಬ ಬಾಬಾ ಸಾಹೇಬರ ತತ್ವವನ್ನು ದಲಿತ ರಾಜಕೀಯ ನಾಯಕರೇ ಭಗ್ನಗೊಳಿಸಿದ್ದು ದುರಂತ. ದಲಿತರ ಸಾಂವಿಧಾನಿಕ ಹಕ್ಕುಗಳ ರಕ್ಷಣೆ, ಅವರ ಮೇಲಿನ ದೌರ್ಜನ್ಯ

ಮಾಡುತ್ತಿರುವುದನ್ನು ಹೋರಾಟದಲ್ಲಿ ದಲಿತ ಸಂಘಟನೆಗಳು ಮಾಡುತ್ತಿರುವುದೇನು, ರಾಜಕೀಯ ನಾಯಕರು ಮಾಡಿದ್ದೇನು, ಮಾಡುತ್ತಿರುವುದೇನು. ಹೀಗೆ ಹಲವಾರು ಪ್ರಶ್ನೆಗಳು ಬಾಬಾ ಸಾಹೇಬರು ಮುಂದೆಳೆದ ರಥವನ್ನು ಹಿಂದಕ್ಕೆ ದೂಕುತ್ತಿರುವುದು ಭಾಸವಾಗುತ್ತಿದೆ. ಇಂದು ಶೋಷಣೆ ನಶಿಸಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ ಕಾರಣ ಹೊಸ ಹೊಸ ರೀತಿಯಾದ ಶೋಷಣೆಗಳು ಇಂದಿನ ಸಮಾಜದಲ್ಲಿ ಹುಟ್ಟಿಕೊಂಡಿವೆ. ಇವುಗಳನ್ನು ಬೇರು ಸಮೇತ ಕಿತ್ತು ಹಾಕುವ ಪ್ರಯತ್ನಗಳು ನಡೆಯುತ್ತಿಲ್ಲ. ಬದಲಾಗಿ ಶೋಷಣೆಯನ್ನು ಹೆಚ್ಚಿಸುವಂತಹ ಹೇಳಿಕೆಗಳನ್ನು ನಮ್ಮನ್ನು ಆಳುತ್ತಿರುವ ನಾಯಕರೇ ನೀಡುತ್ತಿರುವುದನ್ನು ದಿನ ಬೆಳಿಗ್ಗೆಯ ದಿನ ಪತ್ರಿಕೆ ಮತ್ತು ಇನ್ನಿತರ ಸಮೂಹ ಮಾಧ್ಯಮಗಳಲ್ಲಿ ಅವಲೋಕಿಸುತ್ತಿದ್ದೇವೆ. ಪ್ರತಿ ಮನೆಯಲ್ಲೂ ಒಬ್ಬೊಬ್ಬ ಅಂಬೇಡ್ಕರ್ ಹುಟ್ಟು ಅನಿವಾರ್ಯತೆ ಇಂದು ಉಂಟಾಗಿದೆ.

**ಅಂಬೇಡ್ಕರ್ ಪರಂಪರೆ**

ಬಾಬಾ ಸಾಹೇಬರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತಗಳನ್ನು ಸಂವಿಧಾನ ಮೂಲಕ ಆಧುನಿಕ ಭಾರತದಲ್ಲಿ ರೂಢಿಯಲ್ಲಿ ತಂದರು. ಇದರ ಪರಿಣಾಮದಿಂದಾಗಿ ಇಂದು ಭಾರತದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿವರ್ತನೆಗಳು ಎದ್ದು ಕಾಣುತ್ತಿವೆ. ಈ ಸುಧಾರಣೆಗಳು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಂಪರೆಯ ಬಾಬಾ ಸಾಹೇಬರು ಹೇಳಿದಂತೆ ಮೊದಲು ನಮಗೆ ಸಾಮಾಜಿಕ ಸ್ವಾತಂತ್ರ್ಯ ಬೇಕು. ದುರಂತ ಇಂದಿಗೂ ಈ ಸಾಮಾಜಿಕ ಸ್ವಾತಂತ್ರ್ಯ ಸಾಮಾನ್ಯ ಪ್ರಜೆಗೆ ಒಂದು ಕಡೆ ಬಿಡಿ ರಾಜಕೀಯ ಅಧಿಕಾರ ಪಡೆದ ಕೆಳವರ್ಗದ MLA & MP ಗಳಿಗೆ ಸಿಗುತ್ತಿಲ್ಲ.

ಚಿತ್ರದುರ್ಗದ ಎಂ.ಪಿ. ನಾರಾಯಣ ಸ್ವಾಮಿಯವರಿಗೆ ಗೊಲ್ಲರಹಟ್ಟಿಗೆ ಪ್ರವೇಶ ಕೊಡಲಿಲ್ಲ ಕಾರಣ ಪರಿಶಿಷ್ಟ ಜಾತಿಯವರು ಎಂಬ ಕಾರಣಕ್ಕೆ, ಹಾಗೇಯೆ ಕೊರಟಗೆರೆ ಹಾಲಿ ಶಾಸಕರು ಮತ್ತು ರಾಜ್ಯದ ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಇಂದಿಗೂ ನನ್ನನ್ನು ದೇವಸ್ಥಾನದ ಒಳಗೆ ಬಿಡಿಸಿಕೊಳ್ಳುವುದಿಲ್ಲ ಎಂದು ಹೇಳಿಕೆ ನೀಡಿದರು. ಇವು ಕೆಲವು ಉದಾಹರಣೆ ಅಷ್ಟೆ. ಈ ತರಹದ ಸಾವಿರ ಸಾವಿರ ಉದಾಹರಣೆಗಳು ಈ ದೇಶದಲ್ಲಿ ಪ್ರತಿದಿನ ದೀನ ದಲಿತರು ಇಂದಿಗೂ ಅನುಭವಿಸುತ್ತಿದ್ದಾರೆ. ಇವುಗಳಿಗೆಲ್ಲ ಪರಿಹಾರವೆಂದರೆ ಬಾಬಾ ಸಾಹೇಬರು ನೀಡಿರುವ ಅಸ್ತ್ರಗಳ ಪರಿಣಾಮಕಾರಿ ಬಳಕೆ.

**ಬಾಬ ಸಾಹೇಬರ ಆರ್ಥಿಕ ಚಿಂತನೆ**

ಖ್ಯಾತ ಅರ್ಥಶಾಸ್ತ್ರಜ್ಞ ನೊಬೆಲ್ ಪ್ರಶಸ್ತಿ ವಿಜೇತ ಅಮತ್ಯಸೇನರು ಬಾಬ ಸಾಹೇಬ್ ಅಂಬೇಡ್ಕರ್ ಇವರನ್ನು **"ತನ್ನ ಅಥರ್ಶಾಸ್ತ್ರದ ಪಿತಾಮಹ"** ನೆಂದು ಕರೆದರು. ಅಮರ್ತ್ಯಸೇನರು ಇಂಡಿಯಾ: ಎಕನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಸಿಯ ಆಪೊರ್ಚನಿಟಿಜಂ ಎಂಬ ತಮ್ಮ ಪುಸ್ತಕದ ಪೀಠಿಕೆಯಲ್ಲಿ ನೆಹರು ಅವರ ನಡು ರಾತ್ರಿ ಭಾಷಣದ ತುಣುಕುಗಳು ಮತ್ತು ಬಾಬಾ ಸಾಹೇಬರ ಭಾರತ ಸಂವಿಧಾನದ ಪೀಠಿಕೆಯಲ್ಲಿ ಬರೆದ ಪ್ರತಿಜ್ಞ ವಿಧಿಯ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಮಾನತೆ ಆಶ್ವಾಸನೆಯ ಆಶಯ ನಾಡಿ ಮಿಡಿತಗಳನ್ನು ಉಲ್ಲೇಖಿಸಿದರು. ಸ್ವಾತಂತ್ರ್ಯ ಅಭಿವೃದ್ಧಿಯ ಮೂಲಮಂತ್ರ ಬಡತನ, ನಿರುದ್ಯೋಗ ಮತ್ತು ಬೆಲೆ ಏರಿಕೆ ಜ್ವಲಂತ ಸಮಸ್ಯೆ ನಿರ್ಮೂಲನೆಗೆ ಮಿಶ್ರ ಆರ್ಥಿಕ ವ್ಯವಸ್ಥೆ ವಿಧಾನವು

ಭಾರತಕ್ಕೆ ಸೂಕ್ತ ಅಭಿವೃದ್ಧಿ ಮಾದರಿ. ಬಾಬಾ ಸಾಹೇಬರು ಸರಕಾರ ಮಾಡುವ ವೆಚ್ಚಗಳಿಗೆ ಮೂಗುದಾರ ಇರಬೇಕೆಂದು ಎಚ್ಚರಿಕೆ ನೀಡಿದರು. ಅವರು ಮೂಲತಃ ಅರ್ಥಶಾಸ್ತ್ರಜ್ಞ ಮತ್ತು ಬೋಧಕರಾದ ಬಾಬಾ ಸಾಹೇಬರು ಸಾರ್ವಜನಿಕ ವೆಚ್ಚದ ತತ್ವಗಳ ಬಗ್ಗೆ ಸಾಕಷ್ಟು ಅಧ್ಯಯನವಿದ್ದ ಕಾರಣ ಅವರು ಸಾರ್ವಜನಿಕ ವೆಚ್ಚ ನಿರ್ವಹಣೆ ಕುರಿತು ಮೂರು ತತ್ವಗಳನ್ನು ಹೇಳಿರುವವರು. ವಿಶ್ವಾಸತತ್ವ, ಜಾಣ್ಮೆ ತತ್ವ ಮಿತವ್ಯಯ ತತ್ವ ಈ ತತ್ವಗಳನ್ನು ಉಲ್ಲಂಘಿಸಿದಲ್ಲಿ ದೇಶ ಆರ್ಥಿಕ ಅನಾಹುತಗಳನ್ನು ಎದುರಿಸಬೇಕಾದೀತು ಎಂಬ ಎಚ್ಚರಿಕೆಯನ್ನು ನೀಡಿರುವವರು. ಸಾಮಾಜಿಕ ಕಾರ್ಯಗಳ ಮೇಲೆ ಮಾಡುತ್ತಿರುವ ಇಂದಿನ ಸರ್ಕಾರಗಳ ದುಂದು ವೆಚ್ಚಗಳು ದೇಶವನ್ನು ಪುನಃ ಸಾಮಾಜಿಕ ಮತ್ತು ಆರ್ಥಿಕ ದಿವಾಳಿ ಮತ್ತು ಅರಾಜಕತೆಯತ್ತ ತಳ್ಳುತ್ತಿವೆ ಹಾಗೂ ರಾಜಕೀಯ ನಿರಂಕುಶ ಆಡಳಿತದತ್ತ, ಏಕಸ್ವಾಮ್ಯದತ್ತ ಒಯ್ದಿರುತ್ತದೆ.

ದಲಿತರಿಗೆ ಹಗ್ಗದ ಸಾಮಾಜಿಕ ಯೋಜನೆಗಳನ್ನು ನೀಡುವ ಮೂಲಕ ಅವರನ್ನು ಅವರ ನಾಯಕರನ್ನು ಬಾಬಾ ಸಾಹೇಬರ ಹೋರಾಟ ಚಿಂತನೆ ತತ್ವಗಳಿಂದ ವಿಮುಖಗೊಳಿಸಲಾಗಿದೆ, ಇದಕ್ಕೆ ಮುಂಚೂಣಿಯಲ್ಲಿದ್ದ ಸ್ವಾರ್ಥ ಗುಲಾಮ ಪ್ರವೃತ್ತಿಯ ದಲಿತ ನಾಯಕರೇ ಕಾರಣ. ಇವೇಲ್ಲವುಗಳನ್ನು ಗಮನಿಸಿದರೆ ಡಾ.ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳು ಸದಾ ಪ್ರಸ್ತುತವೆನಿಸುತ್ತವೆ. ಕಾರಣ ಇಂದು ಸರ್ಕಾರ ಮಾಡುತ್ತಿರುವ ಅನಗತ್ಯ ವೆಚ್ಚಗಳು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಒಂದು ಕಡೆ ದಿನ ನಿತ್ಯ ದೇಶದ ಪ್ರಜೆಗಳು ಬಳಸುವ ಬಳಸುವ ಆಹಾರ ಧಾನ್ಯಗಳು, ಪೆಟ್ರೋಲ್, ಡೀಸಲ್, ಗ್ಯಾಸ್ ಹೀಗೆ ಅನೇಕ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸಿ ಸಾಮಾನ್ಯ ಪ್ರಜೆಗಳು ತತ್ತರಿಸುವಂತೆ ಮಾಡಿ. ಯಾವುದೋ ಮೂರ್ತಿ ನಿರ್ಮಾಣಕ್ಕೆ ಕೋಟಿ ಕೋಟಿ ಸುರಿಯುವುದನ್ನು ಯಾವ ಅಭಿವೃದ್ಧಿ ಎಂದು ಕರೆಯಲಿ? ಬದಲಾಗಿ ಮೂರ್ತಿ ಯಾರದೋ ಅವರ ಹೆಸರಿನಲ್ಲಿ ದೇಶದ ಪ್ರಜೆಗಳಿಗೆ ಒಳಿತಾಗುವ ಒಂದು ಯೋಜನೆಯನ್ನು ಜಾರಿಗೊಳಿಸಿದರೆ ಅದನ್ನು ಇಡೀ ದೇಶದ ಪ್ರಜೆಗಳು ಒಪ್ಪಿಕೊಳ್ಳುತ್ತಾರೆ. ಸಾರ್ವಜನಿಕರ ತೆರಿಗೆ ಹಣವನ್ನು ದುಂದು ವೆಚ್ಚ ಮಾಡುವುದು ಅಪರಾಧ. ಬಾಬಾ ಸಾಹೇಬರು ಹೇಳಿದ ಹಾಗೇ ಮೇಲಿನ ಮೂರು ತತ್ವಗಳನ್ನು ಪರಿಪಾಲಿಸಿದಾಗ ಮಾತ್ರ ನಮ್ಮ ತೇರಿಗೆ ಮೊತ್ತಕ್ಕೆ ನ್ಯಾಯವನ್ನು ನೀರಿಕ್ಷೆ ಮಾಡಬಹುದಾಗಿದೆ.

**ಅಂಬೇಡ್ಕರ್‌ವರ ರಾಜಕೀಯ ವಿಚಾರಗಳು**

ಡಾ.ಬಿ.ಆರ್.ಅಬೇಡ್ಕರ್‌ರವರ ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ರಾಜಕೀಯ ವಿಚಾರಗಳು ಕೆಲವೊಂದು ಕೇವಲ ಸೈದ್ಧಾಂತಿಕವಾಗಿ ಉಳಿಯುವಂತಾದರೆ, ಮತ್ತೆ ಕೆಲವೊಂದು ಕಾರ್ಯಗೊಳಿಸಬಲ್ಲಂತಹುಗಳಾಗಿವೆ. ಇವರು ಹಾಬ್ಸ್ ಮತ್ತು ಹೆಗಲ್ ರಾಜಕೀಯ ಸಿದ್ಧಾಂತವನ್ನು ಒಪ್ಪುವುದಿಲ್ಲ. ರಾಜ್ಯಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕಿಂತ ಸಮಾಜಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ. ರಾಜ್ಯದ ಗುರಿಯ ಬಗ್ಗೆ ಪ್ರಸ್ತಾಪಿಸಿರುವ ಅಂಬೇಡ್ಕರ್ ಈ ಕೆಳಕಂಡಂತೆ ವಿವರಿಸಿದ್ದಾರೆ. ಮೊದಲನೆಯದಾಗಿ ಪ್ರತಿಯೊಬ್ಬ ವ್ಯಕ್ತಿಯ ಜೀವನ ವ್ಯಕ್ತಿಯ ಸ್ವಾತಂತ್ರದ ರಕ್ಷಣೆ. ಎರಡನೆಯದಾಗಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ನಿರ್ಮೂಲನೆ ಮಾಡುವುದು. ಮೂರನೆಯದಾಗಿ ಆಂತರಿಕ ಭದ್ರತೆ ಮತ್ತು ಆಕ್ರಮಣದಿಂದ ದೇಶವನ್ನು ರಕ್ಷಿಸಬೇಕೆಂದು ಹೇಳಿದ್ದಾರೆ. ಅಂದರೆ ರಾಜ್ಯವು ವ್ಯಕ್ತಿ ಮತ್ತು ಸಮಾಜದ ಇತರ ಸೇವಕನಾಗಿ ಕೆಲಸ ನಿರ್ವಹಿಸಬೇಕೇ ವಿನಹ ಪ್ರಭುವಾಗಿ

ಅಲ್ಲ ಎಂಬುದು ಅಂಬೇಡ್ಕರ್‌ರವರ ಅಭಿಪ್ರಾಯ. ರಾಜ್ಯವು ಜನರ ವಿರುದ್ಧ ದಬ್ಬಾಳಿಕೆ ನಡೆಸಿದರೆ ಜನತೆ ಸಂವಿಧಾನಾತ್ಮಕವಾಗಿ ಅದರ ವಿರುದ್ಧ ಹೋರಾಟ ಮಾಡಬೇಕೆಂದು ಕರೆ ನೀಡಿದ್ದಾರೆ. ರಾಜ್ಯದ ಅಸ್ತಿತ್ವವೇ ದೌರ್ಜನ್ಯ, ದಬ್ಬಾಳಿಕೆ ಮತ್ತು ಅನ್ಯಾಯವನ್ನು ತಡೆಯಲು ಬಲಹೀನರ ಸೇವೆ ಮಾಡಲು ಎಂಬುದು ಅಂಬೇಡ್ಕರ್‌ರವರ ವಾದವಾಗಿದೆ. ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರವೇ ಪ್ರಜಾಪ್ರಭುತ್ವ ಎಂಬ ಅಭಿಪ್ರಾಯವನ್ನು ಜನರಿಂದ ಜನರಿಗಾಗಿ ಸರ್ಕಾರ ಎಂಬ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಅಂಬೇಡ್ಕರ್ ಆರ್ಥಿಕ ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುವ ಸರಕಾರವೇ ಪ್ರಜಾಪ್ರಭುತ್ವ ಎಂದಿದ್ದಾರೆ. ಅಂಬೇಡ್ಕರ್ ಪಾರ್ಲಿಮೆಂಟರಿ ಸರಕಾರದ ಸಮರ್ಥಕರಾಗಿದ್ದೂ, ಅನುವಂಶೀಯ ಆಳ್ವಿಕೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಜನತೆಯಿಂದ ಚುನಾಯಿತ ಪ್ರತಿನಿಧಿಗಳು ಪಾರ್ಲಿಮೆಂಟಿನಲ್ಲಿ ಕಾನೂನುಗಳನ್ನು ಮಾಡಬೇಕು ಎಂದು ಹೇಳಿದ್ದಾರೆ.

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಸಮಾಜದಲ್ಲಿ ಅಸಮಾನತೆ ಇರಬಾರದು, ಬಹುಪಕ್ಷಗಳ ವ್ಯವಸ್ಥೆ ಇರಬೇಕು, ಕಾರ್ಯಂಗದ ಭಯವಿಲ್ಲದೆ ಸರ್ಕಾರದ ನೀತಿಗಳನ್ನು ಜಾರಿಗೊಳಿಸುವ ಶಾಶ್ವತ ಆಡಳಿತ ವರ್ಗ ಇರಬೇಕು, ಸಂವಿಧಾನಾತ್ಮಕ ಮೌಲ್ಯಗಳ ಪರಂಪರೆ ಸತತವಾಗಿ ಬೆಳೆಯಬೇಕು ಮತ್ತು ಮೌಲ್ಯಗಳನ್ನು ಕ್ರಮವಾಗಿ ಅನುಸರಿಸಬೇಕು, ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರ ದಬ್ಬಾಳಿಕೆಯನ್ನು ನಡೆಸಬಾರದು, ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಾರ್ವಜನಿಕ ಪ್ರಜ್ಞೆ ಇರಬೇಕು ಮೊದಲಾದ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

ಭಾರತದಲ್ಲಿ ಸಂಸದೀಯ ಪದ್ಧತಿಯ ಯಶಸ್ವಿಯಾಗಬೇಕಾದರೆ ಈ ಮುಂದಿನ ಅಂಶಗಳು ಮುಖ್ಯವೆಂದಿದ್ದಾರೆ. ಅವುಗಳೆಂದರೆ ಅಸಮಾನತೆ ಇರಬಾರದು, ಸಮರ್ಥ ಪ್ರಬಲವಾದ ವಿರೋಧ ಪಕ್ಷ ವಿರಬೇಕು, ನಿಭಯವೂ, ನಿರ್ಭೀತಿಯಿಂದ ಕೂಡಿರುವ ಕಾರ್ಯಾಂಗವಿದ್ದು, ಇದು ಸರಕಾರದ ನೀತಿಯನ್ನು ಜಾರಿಗೆ ತರಬೇಕು ಹೀಗೆ ಸಂಸದೀಯ ಪ್ರಜಾಪ್ರಭುತ್ವ ಸುಧಾರಣೆಗೆ ಕರೆ ನೀಡಿರುವ ಅಂಬೇಡ್ಕರ್, ಸರ್ಕಾರದ ಗುರಿ ವ್ಯಕ್ತಿಯ ಜೀವನದ, ವ್ಯಕ್ತಿಯ ವಾಕ್ ಸ್ವಾತಂತ್ರ್ಯ, ದಲಿತರ ಹಾಗೂ ಶೋಷಿತ ವರ್ಗದ ಯೋಗಕ್ಷೇಮ ಕೋಮು ಗಲಭೆಗಳನ್ನು ತಪ್ಪಿಸುವುದು. ವಿದೇಶಿ ಆಕ್ರಮಣವನ್ನು ತಡೆಯುವಂತಹ ಗಳಾಗಿರಬೇಕು ಎಂದು ಸಲಹೆ ನೀಡಿದ್ದಾರೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಬಾಬಾ ಸಾಹೇಬ್ ಅಂಬೇಡರ್ಕ್‌ರವರು ಹೇಳಿದ ಎಲ್ಲಾ ವಿಚಾರಧಾರೆಗಳು ತಿರುವಾಗಿವೆ. ಸಮಾಜದಲ್ಲಿ ಕೋಮುವಾದ, ಜಾತೀಯತೆ, ಶೋಷಣೆ, ದಬ್ಬಾಳಿಕೆ, ದೌರ್ಜನ್ಯ, ಅನ್ಯಾಯ, ನಿರುದ್ಯೋಗ ಸಮಸ್ಯೆ, ಭ್ರಷ್ಟಾಚಾರ ವಿಶೇಷವಾಗಿ ಕರ್ನಾಟಕ ಸರ್ಕಾರ ನೇಮಾಕಾತಿಯಲ್ಲಿನ ಭ್ರಷ್ಟಾಚಾರಗಳ ಸರಮಾಲೆಗಳನ್ನು ನೋಡುತ್ತಿದ್ದೇವೆ. ವಿರೋಧ ಪಕ್ಷಗಳು ಸಾಯುವ ಸ್ಥಿತಿಯಲ್ಲಿವೆ. ಒಂದು ಪ್ರಬಲವಾದ, ಪ್ರಮಾಣಿಕವಾದ ವಿರೋಧ ಪಕ್ಷಗಳ ಕೊರತೆಯನ್ನು ಈ ದೇಶ ಎದುರಿಸುತ್ತಿದೆ. ಈ ಕಾರಣಗಳಿಂದ ಈ ದೇಶದಲ್ಲಿ ಮೇಲಿನ ಎಲ್ಲಾ ಸಮಸ್ಯೆಗಳು ರಾರಾಜಿಸುತ್ತಿವೆ.

**ಅಂಬೇಡ್ಕರ್ ಮತ್ತು ರಾಜಕೀಯ ಚಿಂತನೆ**

ಅಂಬೇಡ್ಕರ್ ಅವರ ರಾಜಕೀಯ ಚಿಂತನೆಯ ಹೆಚ್ಚಾಗಿ ಅವರ ಜೀವಿತದ ಅವಧಿಯಲ್ಲಿನ ಸಾಮಾಜಿಕ ಪರಿಸ್ಥಿತಿಯಿಂದ ಪ್ರಭಾವಿತಗೊಂಡಿದೆ ಎಂದು ಹೇಳಬಹುದಾಗಿದೆ. ಕಾರಣ ಅಂಬೇಡ್ಕರ್ ಅವರು

ತಮ್ಮ ಎಲ್ಲ ಚಿಂತನೆಗಳನ್ನು ಸಂಪೂರ್ಣವಾಗಿ ಪ್ರಸ್ತುತ ಸಮಾಜದೊಂದಿಗೆ ತಾಳೆ ಹಾಕಿರುವುದನ್ನು ಗಮನಿಸಬಹುದಾಗಿದೆ. ಮೊದಲನೆಯದಾಗಿ ರಾಜ್ಯದ ಬಗ್ಗೆ ತಿಳಿಸುತ್ತ ಅಂಬೇಡ್ಕರ್ ಅವರು ರಾಜ್ಯವು ಸಮಾಜವನ್ನು ಸಂಘಟನೆ ಮಾಡುವ ಅತ್ಯಂತ ಪ್ರಬಲ ಸಾಮಾಜಿಕ ಸಂಸ್ಥೆಯಾಗಿದ್ದು ಉಳಿದೆಲ್ಲಾ ಸಂಘ–ಸಂಸ್ಥೆಗಳಿಗಿಂತ ವಿಶಿಷ್ಟ ಸ್ಥಾನ ಪಡೆದಂತಹದಾಗಿದೆ ಎಂದಿದ್ದಾರೆ. ಹಾಗೆಯೇ ಈ ರಾಜ್ಯವು ಕಾಯಿದೆಗಳ ಮೂಲಕ ವ್ಯಕ್ತಿಗಳನ್ನು ದಂಡಿಸುವ ಅಧಿಕಾರವನ್ನು ಪಡೆದಿರುತ್ತದೆ. ಆದರೆ ರಾಜ್ಯದ ಅಂತಿಮ ಗುರಿ ಮಾನವನ ಅಭಿವೃದ್ಧಿ ಸಾಧಿಸುವುದೇ ಆಗಿದ್ದು ಪ್ರತಿಯೊಬ್ಬ ನಾಗರಿಕನಿಗೂ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕಲ್ಪಿಸುವ ಹೊಣೆ ರಾಜ್ಯದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಮಾನತೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮೊದಲು ಸಾಮಾಜಿಕ ಸ್ವತಂತ್ರ ನಂತರ ಆರ್ಥಿಕ ಸ್ವಾತಂತ್ರ್ಯ ಎಂದು ತಿಳಿಸಿದ ಅವರು ಸಮಾಜದಲ್ಲಿ ಮೊದಲು ದೀನದಲಿತರ ಉದ್ಧಾರವಾಗದೆ ದೇಶ ಅಭಿವೃದ್ಧಿ ಹೊಂದಲಾರದು.

ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥವು ಸಿಗಲಾರದು ಎಂದು ತಿಳಿಸಿದ್ದಾರೆ. ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಅಂಬೇಡ್ಕರ್‌ರವರು ರಾಜ್ಯವು ಯಾವುದೇ ಒಂದು ಧರ್ಮವನ್ನು ದಿಕ್ಕರಿಸಬಾರದು ಅಥವಾ ಬೆಂಬಲಿಸಬಾರದು ಇದಕ್ಕೆ ಬದಲಾಗಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕು ಎಂದು ತಿಳಿಸಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಅಂಬೇಡ್ಕರ್ ಅವರು ತಿಳಿಸುತ್ತಾ ಪ್ರಜಾಪ್ರಭುತ್ವವೆಂದರೆ ಪ್ರಜೆಗಳೆಲ್ಲರೂ ಸ್ವಾತಂತ್ರ ಮತ್ತು ಸಮಾನತೆಯಿಂದ ಒಂದಾಗಿ ಬೆರೆತು ಜೀವಿಸಿರುವ ಜೀವನಕ್ರಮವೇ ಪ್ರಜಾಪ್ರಭುತ್ವ ಎಂದು ತಿಳಿಸಿದ್ದಾರೆ. ಅಲ್ಲದೆ ಆಡಳಿತದಲ್ಲಿ ನ್ಯಾಯ ಮತ್ತು ಸಮಾನತೆ ಇರಬೇಕು ಹಾಗೂ ರಾಜ್ಯ ಯಾವಾಗಲೂ ಒಂದು ಸಮಾಜವಾದ ರಾಜ್ಯವಾಗಿರಬೇಕು ಎಂದು ತಿಳಿಸುತ್ತಾ ಭೂಮಿಯು ರಾಜ್ಯದ ಒಡೆತನಕ್ಕೆ ಒಳಪಟ್ಟಿರಬೇಕು ಮತ್ತು ರಾಜ್ಯದಲ್ಲಿ ಜಮೀನ್ದಾರರು ಗೇಣಿದಾರರು ಅಥವಾ ಕಾರ್ಮಿಕರು ಇರಬಾರದೆಂದು ತಿಳಿಸಿದ್ದಾರೆ. ಇವುಗಳ ಜೊತೆಗೆ ರಾಜ್ಯದಲ್ಲಿ ಅನುವಂಶಿಯತೆ ಆಡಳಿತ ವಿರಬಾರದು. ಇದಕ್ಕೆ ಬದಲಾಗಿ ಜನಪ್ರತಿನಿಧಿಗಳಿಂದ ಕೂಡಿದ ಸರ್ಕಾರ ಇರಬೇಕೆಂದು ಅಭಿಪ್ರಾಯ ಪಡುತ್ತಾ ಯಾವುದೇ ಸಂದರ್ಭದಲ್ಲಿಯೂ ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಯದಂತೆ ನೋಡಿಕೊಳ್ಳುವ ಉತ್ತಮವಾದ ಹಾಗೂ ಸುಸ್ಥಿರವಾದ ಕಾರ್ಯಾಂಗವಿರಬೇಕೆಂದು ತಿಳಿಸಿದ್ದಾರೆ. ಈ ಮೇಲೆ ತಿಳಿಸಿದ ಬಹುತೇಕ ಚಿಂತನೆಗಳನ್ನು ಅಂಬೇಡ್ಕರ್ ಅವರು ಸಂವಿಧಾನ ರಚನೆಯ ಸಂದರ್ಭದಲ್ಲಿ ಭಾರತದ ಸಂವಿಧಾನದಲ್ಲಿ ಅಳವಡಿಸುವಲ್ಲಿ ಯಶಸ್ವಿಯಾದರು ಎಂದು ಹೇಳಬಹುದಾಗಿದೆ.

ಅಂಬೇಡ್ಕರ್‌ರವರು ತೀವ್ರವಾದ ಸಾಮಾಜಿಕ ಬದಲಾವಣೆ ತರಬೇಕಾದರೆ ರಾಜಕೀಯವಾದಂತಹ ಪ್ರತಿಭಟನೆ ತೀರಾ ಅಗತ್ಯ ಎಂದು ತಿಳಿಸಿದ್ದಾರೆ. ಈ ವಿಷಯವಾಗಿ ಶೋಷಿತ ವರ್ಗವನ್ನು ತಮ್ಮ ಜೀವನದ ಉದ್ದಕ್ಕೂ ಎಚ್ಚರಿಸುತ್ತಾ ಬಂದಿದ್ದನ್ನು ಗಮನಿಸಬಹುದಾಗಿದೆ. ರಾಜಕೀಯ ಪಕ್ಷಗಳ ಬಗ್ಗೆ ಅಂಬೇಡ್ಕರರವರು ತಿಳಿಸುತ್ತಾ ಸರ್ಕಾರ ಹಾಗೂ ಪ್ರಜೆಗಳ ಮಧ್ಯ ಸೇತುವೆಯಂತೆ ಕಾರ್ಯನಿರ್ವಹಿಸುತ್ತವೆ ಎಂದಿದ್ದಾರೆ. ಉತ್ತಮ ಆಡಳಿತದ ಯಶಸ್ಸು ಉತ್ತಮ ರಾಜಕೀಯ ಪಕ್ಷವನ್ನು ಅವಲಂಬಿಸಿದ್ದು ಈ ಪಕ್ಷಗಳ ಪ್ರಗತಿಪರ ಹಾಗೂ ಕ್ರಿಯಾಶೀಲತೆಯಿಂದ ಕೆಲಸ ನಿರ್ವಹಿಸಬೇಕೆಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳಿಗೆ ಸಲಹೆ ನೀಡುತ್ತಾ ಪ್ರತಿಯೊಂದು ರಾಜಕೀಯ ಪಕ್ಷಗಳು ಬಾಹ್ಯ ಒತ್ತಡಗಳಿಂದ ಮುಕ್ತವಾಗಿರಬೇಕು

ಹಾಗೂ ಪಕ್ಷದಲ್ಲಿ ಪ್ರಾಮಾಣಿಕತೆಯ ಹಾಗೂ ದಕ್ಷತೆಯ ಸ್ಥಾನ ನೀಡಬೇಕೆಂದು ತಿಳಿಸಿದ್ದಾರೆ. ಈ ಹಿನ್ನಲೆಯಲ್ಲಿ ರಾಜಕೀಯ ಪಕ್ಷಗಳಿಗೆ ಸಲಹೆ ನೀಡುತ್ತಾ ಪ್ರತಿಯೊಂದು ರಾಜಕೀಯ ಪಕ್ಷಗಳು ಬಾಹ್ಯ ಒತ್ತಡಗಳಿಂದ ಮುಕ್ತವಾಗಿರಬೇಕು ಹಾಗೂ ಪಕ್ಷದಲ್ಲಿ ಪ್ರಾಮಾಣಿಕತೆ ಹಾಗೂ ದಕ್ಷತೆಗೆ ಸ್ಥಾನ ನೀಡಬೇಕೆಂದು ತಿಳಿಸಿದ್ದಾರೆ ಹಾಗೆಯೇ ಸರ್ಕಾರದ ಕೆಲಸ ಉತ್ತಮವಾಗಿರಬೇಕಾದರೆ ಪ್ರಬಲವಾದ ವಿರೋಧ ಪಕ್ಷದ ಅವಶ್ಯಕತೆ ತೀರಾ ಅನಿವಾರ್ಯ ಎಂದು ತಿಳಿಸಿದ್ದಾರೆ ಮುಂದುವರೆದು ಅಂಬೇಡ್ಕರ್‌ರವರು ಮಾನವ ಹಕ್ಕುಗಳ ಬಗ್ಗೆ ಪ್ರಸ್ತಾಪಿಸುತ್ತಾ ದಲಿತರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸಮಾನ ನಾಗರಿಕ ಹಕ್ಕುಗಳನ್ನು ಅನುಭವಿಸಲು ಸೂಕ್ತವಾದ ಮುಕ್ತವಾದ ವಾತಾವರಣ ಇರಬೇಕೆಂದು ಪ್ರಜೆಗಳ ನಾಗರಿಕ ಹಕ್ಕುಗಳಿಗೆ ಅಪಾಯವಾಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದ್ದಾರೆ ಮುಂದುವರೆದು ಕಾನೂನಿನ ಬಗ್ಗೆ ತಿಳಿಸುತ್ತಾ ಸಮಾಜವೊಂದರಲ್ಲಿ ಕಾನೂನುಗಳನ್ನು ರೂಪಿಸಲು ಎಲ್ಲ ವರ್ಗದ ಜನರು ಅದರಲ್ಲಿ ಪಾಲ್ಗೊಳ್ಳಬೇಕು. ಇಲ್ಲವಾದರೆ ಯಾವುದೇ ಪಟ್ಟಭದ್ರಹಿತಾಸಕ್ತಿಗಳು ದೇವರ ಹಾಗೂ ಶಾಸ್ತ್ರಗಳ ಹೆಸರಿನಲ್ಲಿ ಕಾನೂನುಗಳನ್ನು ರೂಪಿಸುವ ಮೂಲಕ ಶೋಷಣೆಗೆ ಗುರಿ ಮಾಡುತ್ತವೆ ಎಂದು ತಿಳಿಸಿದ್ದಾರೆ.

ಕೆಳ ವರ್ಗದಲ್ಲಿ ಜನಿಸಿದ ಇವರು ಮೂಲತಃ ಹೋರಾಟಗಾರರಾಗಿ ದೀನ ದಲಿತರ ರಕ್ಷಣೆಗಾಗಿ ನಿರಂತರವಾದ ಹೋರಾಟವನ್ನು ನಡೆಸಿದರು. ಈ ವಿಷಯವಾಗಿಯೇ ಗಾಂಧಿ ಮತ್ತು ಕಾಂಗ್ರೆಸ್‌ನ್ನು ಕಟುವಾಗಿ ವಿರೋಧಿಸಿದರು. ಸ್ವತಂತ್ರ್ಯ ನಂತರ ಭಾರತ ಅನುಸರಿಸಿದ ಆಲಿಪ್ತ ನೀತಿಯನ್ನು ಕಟುವಾಗಿ ಟೀಕಿಸಿದರು. ಕಾರಣವೇನೆಂದರೆ ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಸ್ನೇಹ ಸಹಕಾರ ಕಡಿಮೆಗೊಳ್ಳುತ್ತದೆ ಎಂದು ತಿಳಿಸಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್‌ರವರು ಹೇಳಿದ ಹಾಗೇಯೇ ಇಂದು ಭಾರತ ದೇಶವನ್ನು ಪಟ್ಟಭದ್ರ ಹಿತಾಸಕ್ತಿ ವರ್ಗಗಳು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಆಳುತ್ತಿವೆ. ಈ ಮೂಲಕ ದೇಶದಲ್ಲಿ ಕೋಮು ಗಲಭೆಗಳನ್ನು ಹುಟ್ಟು ಹಾಕುತ್ತಿವೆ. ಕಳೆದ ಹತ್ತಾರು ವರ್ಷಗಳಲ್ಲಿ ಕಾಣದ ಜ್ವಲಂತ ಸಮಸ್ಯೆಗಳನ್ನು ಇಂದು ನಾವು ದಿನನಿತ್ಯ ಹೊಸ ಹೊಸ ರೀತಿಯಾದಂತಹ ಸಮಸ್ಯೆಗಳನ್ನು ನೊಡುತ್ತಿದ್ದೇವೆ. ಜೊತಗೆ ರಾಜಕೀಯ ಪಕ್ಷಗಳು ಕೊಳೆತು ನಾರುತ್ತಿವೆ. ಆಯ್ಕೆ ಮಾಡಿಕೊಳ್ಳುವುದಕ್ಕೆ ಒಂದನೂ ಶುದ್ಧವಾಗಿಲ್ಲ. ರಾಜಕೀಯ ಪಕ್ಷಗಳಿಗೆ ಪ್ರಜೆಗಳ ಹಿತಾಸಕ್ತಿ ಹಿಡೇರಿಸಬೇಕೆಂಬುದು ದ್ವೀತಿಯ ಆದ್ಯತೆಯಾಗಿದೆ. ಅವರ ಮೊದಲನೆ ಆದ್ಯತೆಗಳೇ ಬೇರೆ. ರಾಜಕೀಯ ಪಕ್ಷಗಳು ಸಮಾಜವನ್ನು ಕೊಳೆತು ನಾರುವಂತಹ ಸ್ಥಿತಿಯನ್ನು ನಿರ್ಮಿಸಿಬಿಟ್ಟಿವೆ.

**ರಾಜ್ಯ ಸಮಾಜವಾದ**

ಅಂಬೇಡ್ಕರ್‌ರವರು ರಾಜ್ಯ ಸಮಾಜವಾದವನ್ನು ಪ್ರತಿಪಾದಿಸುವ ಮೂಲಕ ತಮ್ಮ ಪುರೋಗಾಮಿ ವಿಚಾರಗಳನ್ನು ಬಹಿರಂಗಪಡಿಸಿದ್ದಾರೆ. ಭಾರತದ ಕೈಗಾರಿಕೆಗಳ ಕೈಗಾರಿಕೀಕರಣವು ಎಲ್ಲಾ ವ್ಯವಸಾಯ ಸಮಸ್ಯೆಗಳಿಗೂ ಪರಿಹಾರ ಮದ್ದು ಮತ್ತು ಅಸ್ಪೃಶ್ಯರ ಉದ್ದಾರಕ್ಕೂ ಮಾರ್ಗವೆಂದು ಅವರು ನಂಬಿದ್ದರು. ರಾಜ್ಯವೇ ಕೈಗಾರಿಕೆ ಹಾಗೂ ವ್ಯವಸಾಯವನ್ನು ತನ್ನ ಹತೋಟಿಗೆ ತೆಗೆದುಕೊಂಡು ಸಮಾಜವಾದವನ್ನು ಸ್ಥಾಪಿಸಬೇಕೆಂದು ಪ್ರತಿಪಾದಿಸಿದ್ದಾರೆ. ರಾಜ್ಯ ಸಮಾಜವಾದ ಸ್ಥಾಪನೆಗೆ ಕೆಲವು ಸಲಹೆಗಳನ್ನು ಅವರು ನೀಡಿದ್ದಾರೆ ಅವುಗಳೆಂದರೆ ಮೊದಲನೆಯದಾಗಿ ಪ್ರಮುಖ ಕೈಗಾರಿಕೆಗಳನ್ನು ರಾಜ್ಯದ ಒಡೆತನ ಹಾಗೂ ನಿರ್ವಹಣೆಗೆ ಒಳಪಡಿಸುವುದು. ಎರಡನೆಯದಾಗಿ ವ್ಯವಸಾಯ ಕ್ಷೇತ್ರವನ್ನು ರಾಜ್ಯದ ಕೈಗಾರಿಕೆ ಎಂದು

ಘೋಷಿಸಿ ರಾಜ್ಯದ ವಶಕ್ಕೆ ತೆಗೆದುಕೊಳ್ಳುವುದು. ಹಾಗೂ ರಾಜ್ಯದ ಸ್ಥಾಪನೆ ಮತ್ತು ಸಾಮೂಹಿಕ ಉತ್ಪಾದನೆಗೆ ಆದ್ಯತೆ ನೀಡಬೇಕೆಂದು ಹೇಳಿದ್ದಾರೆ. ಇದರಿಂದ ರಾಜ್ಯ ಸಮಾಜವಾದ ಸ್ಥಾಪನೆ ಸಾಧ್ಯ ಎಂದು ಪ್ರತಿಪಾದಿಸಿದ್ದಾರೆ.

ದುರಂತ ಏನೆಂದರೆ ಮೊನಿಟೈಜೇಷನ್ ಎಂಬ ಹೆಸರಿನಲ್ಲಿ ರಾಜ್ಯದ ಆಸ್ತಿಗಳನ್ನು ಪ್ರಮುಖವಾಗಿ ವಿಮಾನಯಾನ ಸಂಸ್ಥೆಗಳು, ರೈಲ್ವೆ ನಿಲ್ದಾಣಗಳು, ಭೂಮಿ, ಗಣಿಗಾರಿಕೆಗಳನ್ನು, ರಾಷ್ಟ್ರೀಯ ಹೆದ್ದಾರಿಗಳು ಮುಂತಾದ ರಾಜ್ಯ ಒಡೆತನದ ಆಸ್ತಿಗಳನ್ನು ಸದ್ದಿಲ್ಲದೆ ಖಾಸಗಿಯವರಿಗರ ಮಾರಾಟ ಮಾಡುತ್ತಿದ್ದಾರೆ. ಮುಂದೆ ಇದೇ ಖಾಸಗಿಯವರು ಹೇಳಿದ ಹಾಗೆ ನಾವೆಲ್ಲರು ಕೇಳಬೇಕಾಗುತ್ತದೆ ಇವೇ ಹೊಸ ಹೊಸ ಶೋಷಣೆಗೆ ಸರ್ಕಾರವೇ ಪರೋಕ್ಷವಾಗಿ ಅವಕಾಶ ಮಾಡಿಕೊಡುತ್ತಿದೆ. ಇವೆಲ್ಲವುಗಳನ್ನು ತಡೆಯಲಿಕ್ಕೆ ಡಾ.ಬಾಬಾ ಸಾಬೇಬರು ಹೇಳಿದ ಪ್ರಬಲವಾದ ರಾಜಕೀಯ ಭಾಗವಹಿಸುವಿಕೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದ್ದರು.

**ಪ್ರತ್ಯೇಕ ಚುನಾವಣಾ ಕ್ಷೇತ್ರ**

ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಗೊತ್ತು ಮಾಡುವಂತೆ ಒತ್ತಾಯಿಸಿದರು. ಆದರೆ ಗಾಂಧೀಜಿಯವರು ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿಂದ ದೀರ್ಘಾವಧಿಯಲ್ಲಿ ಹಿಂದೂ ಸಮಾಜದ ಮೇಲೆ ಉಂಟಾಗುವ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ವಿರೋಧ ವ್ಯಕ್ತಪಡಿಸಿದ್ದರು. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ನಿಗದಿ ಪಡಿಸಿದಾಗ ಮಾತ್ರವೇ ಅಸ್ಪೃಶ್ಯರಿಗೆ ನಿಜವಾದ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಧಿಸಲು ಸಾಧ್ಯವೆಂದು ಅಂಬೇಡ್ಕರ ವಾದಿಸಿದರೆ ಗಾಂಧೀಜಿಯವರು ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ಗೊತ್ತುಪಡಿಸಿದರೆ ಅಸ್ಪೃಶ್ಯರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಪ್ರತ್ಯೇಕವಾಗಿ ಉಳಿದು ಬಿಡುತ್ತಾರೆ ಹಾಗೂ ರಾಷ್ಟ್ರದ ಐಕ್ಯತೆಗೆ ಧಕ್ಕೆ ಉಂಟಾಗುತ್ತದೆ ಎಂದು ವಾದಿಸಿದರು ಅಂತಿಮವಾಗಿ ಒಪ್ಪಂದದ ಪ್ರಕಾರ ಅಸ್ಪೃಶ್ಯರಿಗೆ ಮೀಸಲು ಕ್ಷೇತ್ರವನ್ನು ನಿಗದಿಪಡಿಸಲಾಯಿತು.

**ಮೀಸಲಾತಿ**

ಭಾರತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅಸ್ಪೃಶ್ಯತೆ ಒಂದು ಸಾಮಾಜಿಕ ಅಸಮಾನತೆ ಎಂದು ಅಂಬೇಡ್ಕರ್‌ವರು ಭಾವಿಸಿದ್ದರು. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸಲು ಅಸ್ಪೃಶ್ಯರಿಗೆ ಮೀಸಲಾತಿ ನೀಡಬೇಕೆಂದು ಒತ್ತಿ ಹೇಳಿದರು. ಮೀಸಲಾತಿಯ ಸೌಲಭ್ಯದಿಂದ ದೂರ ಉಳಿದಿರುವ ವ್ಯಕ್ತಿ ಈ ದೇಶದಲ್ಲಿ ಯಾರೂ ಇಲ್ಲ. ಎಲ್ಲರೂ ಈ ಸೌಲಭ್ಯವನ್ನು ಅನುಭವಿಸುತ್ತಿದ್ದಾರೆ.

**ಶಿಕ್ಷಣ**

ಬ್ರಿಟಿಷ್ ಸರ್ಕಾರವು ಶಿಕ್ಷಣವನ್ನು ಗುಲಾಮಗಿರಿಯನ್ನು ಭದ್ರಗೊಳಿಸುವ ವ್ಯವಸ್ಥೆಯನ್ನಾಗಿ ಮಾಡಿರುವುದನ್ನು ಟೀಕಿಸಿದ್ದ ಅಂಬೇಡ್ಕರ್ ಸಮಾನತೆ ಮತ್ತು ಜನತಾಂತ್ರಿಕ, ಮೌಲ್ಯಗಳನ್ನು ಎತ್ತಿ ಹಿಡಿಯುವ ಮತ್ತು ಜೀವನಕ್ಕೆ ನೇರವಾಗಿ ಸಂಬಂಧ ಪಡುವ ಶಿಕ್ಷಣಕ್ರಮವನ್ನು ಆರೋಪಿಸುವಂತೆ ಕರೆ ನೀಡಿದ್ದರು.

ಇವರು ಸಾಮಾಜಿಕ ಅಸಮಾನತೆಗಳನ್ನು ಬೋಧಿಸುವ ಪಠ್ಯಕ್ರಮ ರದ್ದು, ಕಡ್ಡಾಯ ಹಾಗೂ ಉಚಿತ ಪ್ರಾಥಮಿಕ ಶಿಕ್ಷಣ ನೀಡಿಕೆಗೆ ಒತ್ತು, ವಯಸ್ಕರ ಶಿಕ್ಷಣಕ್ಕೆ ಆದ್ಯತೆ, ವೃತ್ತಿ ಆಧಾರಿತ ಶಿಕ್ಷಣ, ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿಕೆ, ಇವೇ ಮೊದಲಾದ ಸಲಹೆಯನ್ನು ನೀಡಿದ್ದಾರೆ. ಪ್ರಾಂತೀಯ ವಿಶ್ವವಿದ್ಯಾನಿಲಯಗಳ ಪುನರ್ ಸಂಘಟನೆ ಮತ್ತು ಪ್ರಾದೇಶಿಕ ವಿಶ್ವವಿದ್ಯಾನಿಲಯಗಳ ಆರಂಭ ಹಾಗೂ ಅವುಗಳನ್ನು ತರಬೇತಿ ಕೊಡುವ ವಿಶ್ವವಿದ್ಯಾಲಯಗಳನ್ನಾಗಿ ಪರಿವರ್ತಿಸಬೇಕೆಂದು ಕರೆ ನೀಡಿದರು ಹಾಗೂ ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಜನತಾ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಶಾಲಾ–ಕಾಲೇಜುಗಳನ್ನು ಕೆಲಕಾಲ ನಡೆಸಿಕೊಂಡು ಬಂದರು ಎಲ್ಲರಿಗಾಗಿ ಶಿಕ್ಷಣ ಹಾಗೂ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕುವಂತಹ ಶಿಕ್ಷಣ ವ್ಯವಸ್ಥೆಗೆ ಕಾನೂನಿನ ಬೆಂಬಲವನ್ನೂ ಅಂಬೇಡ್ಕರ್‌ರವರು ಒತ್ತಿ ಹೇಳಿದರು. ಆದರೆ ಇಂದು ದೇಶದಲ್ಲಿ ಶಿಕ್ಷಣವನ್ನು ವ್ಯಾಪಾರಿಕರಣಗೊಳಿಸುತ್ತಿರುವುದು ಆಘಾತಕಾರಿ ಬೆಳವಣಿಗೆ. ಶಿಕ್ಷಣ ಸಂಸ್ಥೆಗಳು ಕೈಗಾರಿಕೆಗಳಾಗುತ್ತಿವೆ. ವಿದ್ಯಾರ್ಥಿಗಳು ಉತ್ಪಾದನೆಯಾಗುತ್ತಿರುವ ವಸ್ತುಗಳಾಗುತ್ತಿದ್ದಾರೆ. ಶಿಕ್ಷಣದಲ್ಲಿ ಮೌಲ್ಯಗಳು ಕ್ಷೀಣಿಸುತ್ತಿವೆ. ನೈತಿಕ ಪಾಠಗಳಲು ಕಣ್ಮರೆಯಾಗುತ್ತಿವೆ. ಪಾಠ ಮಾಡುವ ವ್ಯಕ್ತಿಗಳು ದುಡ್ಡಿಗಾಗೆ ಬಂದು ಹೋಗುವ ಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗುತ್ತಿದೆ.

**ಧರ್ಮ ಮತ್ತು ಜಾತಿ**

ಅಂಬೇಡ್ಕರ್‌ರವರು ಕಮ್ಯುನಿಸ್ಟರಂತೆ ಧರ್ಮವನ್ನು ಉಗ್ರವಾಗಿ ಖಂಡಿಸಲಿಲ್ಲ. ಇವರು ಮೂಲತಃ ಹಿಂದೂ ಧರ್ಮದ ವಿರೋಧಿಗಳಲ್ಲ. ಜಾತಿ ವ್ಯವಸ್ಥೆ ಎಂಬ ಕಳಂಕವನ್ನು ಕಿತ್ತೆಸೆಯಲು ಪ್ರಯತ್ನಿಸಿದರು. ಹಾಗೂ ಬೌದ್ಧ ಧರ್ಮವನ್ನು ವಿಶೇಷವಾಗಿ ಅಧ್ಯಯನ ಮಾಡಿದ ಇವರು ಹಿಂದೂ ಧರ್ಮದಲ್ಲಿನ ಜಾತಿಯತೆಯನ್ನು ಕಿತ್ತೆಯೆಸೆಯಲು ಸಾಧ್ಯವಾಗದಿದ್ದಾಗ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಹಿಂದೂ ಧರ್ಮದಲ್ಲಿನ ಜಾತೀಯತೆಯಿಂದ ಹಾಗೂ ಹಿಂದೂ ಧರ್ಮ ಅಸ್ಪೃಶ್ಯರನ್ನು ನೋಡಿಕೊಳ್ಳುತ್ತಿದ್ದ ರೀತಿಯಿಂದ ಅಂಬೇಡ್ಕರ್ ಅಕ್ಟೋಬರ್ 14, 1935ರಂದು ಈ ಹೇಳಿಕೆಯನ್ನು ಹೇಳಿದರು. "ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯುವುದಿಲ್ಲ" ಎಂದು ಅಂತಿಮವಾಗಿ ಬೌದ್ಧ ಧರ್ಮ ಸ್ವೀಕರಿಸಿ ಡಿಸೆಂಬರ್ 6, 1956ರಂದು ಕೊನೆಯುಸಿರೆಳೆದರು.

**ಉಪಸಂಹಾರ**

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ ಪ್ರಸ್ತುತ ದಿನಮಾನಗಳಲ್ಲಿ ದೇಶದಲ್ಲಿ ಜ್ವಲಂತ ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣಿಸುತ್ತಿವೆ. ಹೊಸ ಹೊಸ ಸಮಸ್ಯೆಗಳು ಹುಟ್ಟುತ್ತಿವೆ ಇದಕ್ಕೆ ಕಾರಣಗಳೇನು ಎಂದೂ ತಾರ್ಕಿಕವಾಗಿ ಚಿಂತನೆ ಮಾಡದಿದ್ದರೆ ಅವೇ ಸಮಸ್ಯೆಗಳಲ್ಲಿ ಬೆಂದು ಮಣ್ಣಾಗಬೇಕಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಡಾ.ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಧ್ವನಿ ಎತ್ತುವ ಕಾಲ ಸನ್ನಿಹಿತವಾಗುತ್ತಿದೆ. ಬಾಬಾ ಸಾಹೇಬರು ಹಿಂದೆಂದಿಗಿಂತಲೂ ಪ್ರಸ್ತುತ ದಿನಮಾನಗಳಲ್ಲಿ ತುಂಬಾ ನೆನಪಾಗುತ್ತಾರೆ ಕಾರಣ ಅವರು ಯಾವ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳು ವಿರುದ್ಧ ಹೋರಾಡಿದ್ದರೋ ಅವೇ ಮತ್ತೆ ಮತ್ತೆ ಮರು ಕಳುಸುತ್ತಿವೆ. ಈ ದೇಶದಲ್ಲಿ ಇಂದಿನ ಬೆಳವಣಿಗೆಗಳು ತೀರಾ

ಭಯಾನಕವಾಗಿವೆ. ದೇಶದ ಬೆಳವಣಿಗೆಗೆ ಮಾರಕವಾಗಿವೆ. ಜಾತೀಯತೆ, ಧರ್ಮ ಧರ್ಮಗಳ ನಡುವೆ ಕಲಹ, ಸಂಭವಿಸುತ್ತಿರುವ ಸಾವುಗಳು, ವ್ಯಾಪಾರೀಕರಣ, ಭ್ರಷ್ಟಚಾರ, ರೈತರ ಸಮಸ್ಯೆಗಳು, ಕಾರ್ಮಿಕರ ಸಮಸ್ಯೆಗಳು, ಆಹಾರ ಬೆಲೆಗಳ ಏರಿಕೆ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮುಂತಾದ ಸಮಸ್ಯೆಗಳ ಸರಮಾಲೆ ಇವೆ. ಇಂತಹ ಎಲ್ಲಾ ಸಮಸ್ಯೆಗಳಿಗೆ ಬಾಬಾ ಸಾಹೇಬರ ಚಿಂತನೆಗಳಲ್ಲಿ ಪರಿಹಾರವಿದ್ದು, ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ತೀರಾ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, (ಸಂಪುಟ–1). (2021) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳು–8. ಬೆಂಗಳೂರು.
- ಮುರಳಿ ಮನೋಹರ್. (2017). ಕನ್ನಡಕ್ಕೆ ಸುಜ್ಞಾನಮೂರ್ತಿ, ಅಂಬೇಡ್ಕರ್ ದೃಷ್ಠಿಯಲ್ಲಿ ಸಾಮಾಜಿಕ ಸಬಲೀಕರಣ, ಲಡಾಯಿ ಪ್ರಕಾಶನ ಗದಗ.
- ಮುನಿಯಪ್ಪ. ಎನ್.ಸಿ. (2015). ಭಾ.ಆ.ಸೇ(ವಿಶ್ರಾಂತ), ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಋಣ ಸಂದಾಯ ಚಿಂತನೆಗಳು, ಜನಪ್ರಗತಿ ಪ್ರೆಸ್, ಬೆಂಗಳೂರು.
- ರಂಜಾನ್ ದರ್ಗಾ. (2015) ಬಸವಣ್ಣ ಮತ್ತು ಅಂಬೇಡ್ಕರ್ ಹಾಗೂ ಇತರ ಲೇಖನಗಳು, ಲಡಾಯಿ ಪ್ರಕಾಶನ, ಗದಗ.